ವಿಷಯ : ಕನ್ನಡ ಭಾಷಾ ಮಾಧ್ಯಮ ಕುರಿತು ಸರ್ಕಾರದ ನೀತಿ.

ಪ್ರ. ಸಂಖ್ಯೆ 18 (ತಿ3) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸರ್ಕಾರವು ಶಿಕ್ಷಣ ಮಾಧ್ಯಮದಲ್ಲಿ ಯಾವ ಭಾಷಾ ಸೂತ್ರವನ್ನು ಅನುಸರಿಸುತ್ತದೆ ;

ಆ) ಕನ್ನಡ ಭಾಷೆಯನ್ನು ಮಾಧ್ಯಮವನ್ನಾಗಿ ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಸರ್ಕಾರವು ಪ್ರೋತ್ಸಾಹವನ್ನೇನಾದರೂ ನೀಡುತ್ತಿದೆಯೇ ?

ಇ) ಹಾಗಿದ್ದಲ್ಲಿ ಆ ಸೌಲಭ್ಯಗಳು ಯಾವುವು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಪ್ರಾಥಮಿಕ ಶಾಲಾ ಹಂತದಲ್ಲಿ ಮಾಧ್ಯಮವಾಗಿ ಕನ್ನಡ, ಇಂಗ್ಲೀಷ್, ತಮಿಳು, ಹಿಂದಿ, ತೆಲುಗು, ಉರ್ದು, ವಲಿಯಾಳಂ, ಗುಜರಾತಿ, ಮರಾಠಿ ಈ ಭಾಷೆಗಳನ್ನೂ ಮತ್ತು ಪ್ರೌಢಶಾಲಾ ಹಂತದಲ್ಲಿ ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮರಾಠಿ ಈ ಭಾಷೆಗಳನ್ನು ಅನುಸರಿಸಲಾಗುತ್ತಿದೆ.

ಆ) ಇಲ್ಲ.

ಇ) 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ವರಲಕ್ಷ್ಮಿ 32 ಬೀಜೋತ್ಪಾದನೆ

ಪ್ರ. ಸಂಖ್ಯೆ 19 (ತಿ8) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಬೀಜ ನಿಗಮದಿಂದ ವರಲಕ್ಷ್ಮಿ, ಡಿಸಿಹೆಚ್. 32ರ ಎಷ್ಟು ಪ್ಲಾಟುಗಳನ್ನು ಹಂಚಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು);

ಆ) ಕರ್ನಾಟಕ ರಾಜ್ಯ ಬೀಜ ನಿಗಮವು ಡಿಸಿಹೆಚ್.-32 ಹಾಗೂ ವರಲಕ್ಷ್ಮಿ ಹತ್ತಿ ಬೀಜೋತ್ಪಾದನೆ ಮಾಡುವವರನ್ನು ಆಯ್ಕೆ ಮಾಡುವಾಗ ಯಾವ ಯಾವ ಆಧಾರಗಳನ್ನು ಇಟ್ಟುಕೊಂಡು ಆಯ್ಕೆ ಮಾಡುತ್ತದೆ;

ಇ) ಒಂದೇ ಮನೆತನದ ಕೆಲವೇ ಶ್ರೀಮಂತ ರೈತ ವರ್ಗದವರೇ ಬೀಜ ನಿಗಮದ ಮೇಲೆ ಪ್ರಭಾವ ಬೀರಿ ಬೀಜೋತ್ಪಾದನೆಯ ಬಹುಪಾಲನ್ನು ಪಡೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ;

ಈ) ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮವನ್ನು ಕೈಕೊಳ್ಳಲಾಗಿದೆ ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು).—

ಅ) 1985-86ನೇ ಸಾಲಿನಲ್ಲಿ ಡಿಸಿಹೆಚ್.-32ರ ಪ್ಲಾಟುಗಳನ್ನು ಯಾರಿಗೂ ಹಂಚಿಲ್ಲ. ಆದರೆ ವರಲಕ್ಷ್ಮಿ ಹತ್ತಿಯ 396 ಬೀಜೋತ್ಪಾದನೆಯ ಪ್ಲಾಟುಗಳನ್ನು ಹಂಚಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ.

ಆ) 1. ನಿಗದಿಪಡಿಸಿದ 31-5-1985ರೊಳಗೆ ಬೀಜೋತ್ಪಾದನೆಯ ಪ್ಲಾಟು ಹಂಚಿಕೆಗೆ ಅರ್ಜಿ ಸಲ್ಲಿಸಿದವರಿಗೆ.

2. ನಿಗಮದ ಬೀಜೋತ್ಪಾದಕ ಶೇರುದಾರರು 1982ರಲ್ಲಿ ವರಲಕ್ಷ್ಮಿ ಹತ್ತಿ ಬೀಜೋತ್ಪಾದನೆಯನ್ನು ತೆಗೆದುಕೊಂಡಿದ್ದು 1985ರಲ್ಲಿ ಬೀಜೋತ್ಪಾದನೆಯ ಪ್ಲಾಟ್‌ಗೆ ಅರ್ಜಿ ಸಲ್ಲಿಸಿದವರಿಗೆ.

3. ಅರ್ಜಿಗಳು ಕಡಿಮೆ ಬಂದ ಪಕ್ಷದಲ್ಲಿ ಉಳಿದ ಪ್ಲಾಟುಗಳನ್ನು 1983ನೇ ಮುಂಗಾರಿನಲ್ಲಿ ವರಲಕ್ಷ್ಮಿ ಮತ್ತು ಡಿಸಿಹೆಚ್.-32 ಬೀಜೋತ್ಪಾದನೆಯನ್ನು ಕೈಗೊಂಡು ಉತ್ಪತ್ತಿಸಿದ ಎಲ್ಲಾ ಬೀಜವನ್ನು ಒಪ್ಪಿಸಿದವರಿಗೆ.

4. ಕಾರ್ಪೊರೇಷನ್ ಬೀಜೋತ್ಪಾದಕ ಶೇರುದಾರರುಗಳಲ್ಲಿ ಮತ್ತು ಹತ್ತಿ ಬೀಜೋತ್ಪಾದಕರುಗಳಲ್ಲಿ ಬಹಳ ಹಳಬರಿಗೆ.

5. ಶೇಕಡಾ 10ರಷ್ಟು ಪ್ಲಾಟುಗಳನ್ನು (400ರಲ್ಲಿ 40 ಪ್ಲಾಟುಗಳು) ಸರ್ಕಾರ ನಿರ್ಧರಿಸಿದವರಿಗೆ ಹಂಚುವುದಕ್ಕೆ ಮಾಸಲಾಗಿಡುವುದು.

ಇ) ಇಲ್ಲ.

ಈ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.